A.—Dr. R. NAGAN GOWDA (Minister for Agriculture).—

(*a*) No.

(*b*) Does not arise in view of reply to (*a*).

(*c*) A loan of Rs. 75,000 has been sanctioned to the Regulated Market Committee, Arsikere, towards acquisition of the lands required for the market yard.

(*d*) Yes.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆಯಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಜಾರಿಯಲ್ಲದೆಯಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಕೆ. ಪಂಚಾಕ್ಷರಯ್ಯ.—ಈ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಸ್ಥಾಪಿಸುವುದಕ್ಕೆ ಮುಂಚೆ ಅಲ್ಲಿ ಯಾರ್ಡನ್ನು ಪ್ರಾರಂಭಿಸಬೇಕಾಗಿತ್ತಲ್ಲವೇ ?

ಡಾ॥ ಆರ್. ನಾಗನಗೌಡ.—ಅಲ್ಲಿ ಒಂದು ಯಾರ್ಡನ್ನು ಷುರು ಮಾಡತಕ್ಕ ಬಗ್ಗೆ ಈಗಾಗಲೇ ಸರಿಯಾದ ಜಮೀನ್ ತೆಗೆದುಕೊಂಡಿದ್ದೇವೆ. ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಸ್ಥಾಪಿಸುವುದಕ್ಕೆ ಮುಂಚೆ ಈ ಯಾರ್ಡನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ರೆಗ್ಯುಲೇಟೆಡ್ ಮಾರ್ಕೆಟ್ ಈಗಾಗಲೇ ಜಾರಿಗೆ ಬಂದು ಎಷ್ಟು ವರ್ಷಗಳಾದವು ?

ಡಾ॥ ಆರ್. ನಾಗನಗೌಡ.—ಆ ವಿಚಾರ ತಮಗೇ ಗೊತ್ತಿರಬೇಕು. ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—ಅದು ಪ್ರಾರಂಭವಾಗಿ ಇಲ್ಲಿಗೆ ಮೂರು ವರ್ಷಗಳ ಮೇಲಾಯಿತೆಂದರೆ ಒಪ್ಪುತ್ತೀರಾ ?

ಡಾ॥ ಆರ್. ನಾಗನಗೌಡ.—Thanks. ಈಗಾಗಲೇ ಅಲ್ಲಿ ಒಂದು ಯಾರ್ಡನ್ನು ಮಾಡುವುದಕ್ಕೂ ಮತ್ತು ಕಟ್ಟಡವನ್ನು ಕಟ್ಟುವುದಕ್ಕೂ ನಿವೇಶನ ಅಕ್ವೈಯರ್ ಮಾಡಿಕೊಳ್ಳಲು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿಸಿದೆ ಮತ್ತು ಇದಕ್ಕಾಗಿ 75ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಯಾರ್ಡ್ ಇಲ್ಲದೆ ಹೋದುದರಿಂದ ಅಲ್ಲಿ ವರ್ಷದಲ್ಲೆಲ್ಲಾ ಅನೇಕ ಸಹಸ್ರಾರು ರೂಪಾಯಿಗಳ ನಷ್ಟ ಸಂಭವಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿ ರಚನೆಯಾದ ಮೇಲೆ ಕೆಲವುಕಾಲ ದೊಳಗಾಗಿ ಇದು ಆಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ರೀತಿ ಇನ್ನು ಮುಂದಕ್ಕೆ ನಷ್ಟಸಂಭವಿಸುವುದನ್ನು ಕಡಮೆ ಮಾಡುವುದಕ್ಕೂ ಮತ್ತು ರೈತರಿಗೆ ತಕ್ಕ ಸೌಕರ್ಯಗಳನ್ನೊದಗಿಸುವುದಕ್ಕೂ ತಾವು ಬೇಗ ಸೂಕ್ತಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ಈಗಾಗಲೆ 75 ಸಾವಿರ ರೂಪಾಯಿಗಳಷ್ಟು ಮಂಜೂರು ಮಾಡಲಾಗಿದೆ. ಭೂಮಿ ಅಕ್ವೈರ್ ಮಾಡಿಕೊಳ್ಳಲು ಪ್ರಯತ್ನ ನಡೆಯುತ್ತಿದೆ. ಆದಷ್ಟು ಬೇಗನೆ ಕೆಲಸ ಪ್ರಾರಂಭವಾಗುತ್ತದೆ.

Regulated Market in Bangalore City.

Q.—572. Sri R. ANANTARAMAN (Chamarajpet).—

Will the Government be pleased to state :—

(*a*) whether the Government are contemplating to introduce Regulated Market in the City of Bangalore ;

(*b*) whether the opinion of the merchant community has been taken ;

(*c*) when they are going to introduce the same in the City of Bangalore ?

A.—Dr. R. NAGAN GOWDA (Minister for Agriculture).—

(*a*) Yes.

(*b*) The President of the Grain Merchants' Association, Bangalore, was requested to furnish the opinion of the Association in the matter, but he did not comply with the request.

(*c*) Necessary action is being taken to start the Market as early as possible.

Sri R. ANANTARAMAN.—Who is the President of the Merchants' Association ?

Dr. R. NAGAN GOWDA.—It is Sri Rudraiya.

Sri R. ANANTARAMAN.—Is it not a fact that the President complained that sufficient time was not given to him to ascertain the opinion of his Association ?

Dr. R. NAGAN GOWDA.—This matter about starting the Regulated Market in Bangalore has been hanging for a number of years. I do not think there is complaint that they did not have enough time. For over three years the matter has been before the Corporation. We asked the Corporation to give their opinion. They did not give it.

Sri R. ANANTARAMAN.—Have you consulted the Chamber of Commerce ?

Dr. R. NAGAN GOWDA.—I want notice, but the notification regarding the starting of regulated market is published in the Gazette and that I think is sufficient notice for all the bodies concerned.

Sri R. ANANTARAMAN.—Have you at least called for a meeting of the Merchants individually ?

Dr. R. NAGAN GOWDA.—As a matter of fact, the Grain Merchants' Association came on a deputation and met me one day. We discussed the matter. The question of regulated market has been before the public of Bangalore and the merchants particularly for a very long time and if they had anything to inform the Government they could have done it long while ago.

ಶ್ರೀ ಆರ್. ಅನಂತರಾಮ್.—ಈ ಬೆಂಗಳೂರು ನಗರಕ್ಕೆ ಬರತಕ್ಕ ದವನಪೆಲ್ಲಾ ಹಳ್ಳಿಯ ರೈತರುಗಳಿಂದ ಬರುತ್ತಿಲ್ಲ. ದೊಡ್ಡ ದೊಡ್ಡ ಪಟ್ಟಣಗಳಿಂದ ಬರುತ್ತಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಹಾಗೂ ಉಂಟು; ಹೀಗೂ ಉಂಟು. ಬೆಳೆಯತಕ್ಕ ರೈತರಲ್ಲಿ ಸಣ್ಣವರೂ ಇದ್ದಾರೆಂದು ನಮ್ಮ ಭಾವನೆ.

Sri R. ANANTARAMAN.—Are the Government aware that the grievance of the merchants of Bangalore is that this regulated market has been thrust upon them ?

Dr. R. NAGAN GOWDA.—Merchants at first always feel like that. After the Committee begins to work, they will appreciate its usefulness.

ಶ್ರೀ ಕೆ. ವಿ. ಬೈರೇಗೌಡ.—ಈ ಬೆಂಗಳೂರು ಜಿಲ್ಲೆಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಸ್ಥಾಪಿಸಬೇಕೆಂದು ಜನರು ಎಷ್ಟು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದಾರೆ ?

ಡಾ॥ ಆರ್. ನಾಗನಗೌಡ.—ನಾನು ಇಲ್ಲಿಗೆ ಬಂದಾಗಿನಿಂದಲೂ ಅದಕ್ಕೆ ಜನರು ಒತ್ತಾಯಮಾಡುತ್ತಿದ್ದಾರೆ. ಆದರೆ ಅದಕ್ಕೆ ಹಿಂದೆ ಯಾವಾಗಿನಿಂದ ಒತ್ತಾಯಪಡಿಸುತ್ತಿದ್ದರೆಂಬುದನ್ನು ನಾನು ತಿಳಿಸಲಾರೆ.

ಶ್ರೀ ಕೆ. ವಿ. ಬೈರೇಗೌಡ.—ಮೊದಲು ಯಾವಾಗಿನಿಂದ ಒತ್ತಾಯಪಡಿಸುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಬಹಳ ದಿವಸಗಳಿಂದಲೂ ಒತ್ತಾಯಪಡಿಸುತ್ತಿರುವುದಾಗಿ ಕೇಳಿದ್ದೇನೆ.

ಶ್ರೀ ಕೆ. ವಿ. ಬೈರೇಗೌಡ.—ಹಾಗೆ ಇಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಸ್ಥಾಪಿಸಬಾರದು ಎನ್ನುವುದಕ್ಕೆ ಕಾರ್ಪೊರೇಷನ್‌ನವರು ಏನಾದರೂ ಹೇಳಿದ್ದಾರೆ ತಿಳಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಕಾರ್ಪೊರೇಷನ್ ಮತ್ತು ಜಿಲ್ಲಾ ಬೋರ್ಡುಗಳನ್ನು ಕೇಳತಕ್ಕದ್ದು ಒಂದು ಸಂಪ್ರದಾಯ. ಅದರಂತೆ ನಾವೂ ಅವರ ಅಭಿಪ್ರಾಯ ಕೇಳಿದ್ದೇವೆ.

ಶ್ರೀ ಕೆ. ವಿ. ಬೈರೇಗೌಡ.—ಸರ್ಕಾರ ಇದುವರೆಗೂ ರೆಗ್ಯುಲೇಟೆಡ್ ಮಾರ್ಕೆಟ್ ಮಾಡದೇ ಇರುವುದು ಅವರ ಕರ್ತವ್ಯಲೋಪವಲ್ಲವೇ ?

ಡಾ॥ ಆರ್. ನಾಗನಗೌಡ.—ರೆಗ್ಯುಲೇಟೆಡ್ ಮಾರ್ಕೆಟ್ ಈಗ ಮಾಡಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ರೆಗ್ಯುಲೇಟೆಡ್ ಮಾರ್ಕೆಟ್ಟುಗಳನ್ನು ಮಾಡುವಾಗ ಖಾಸಗೀ ವ್ಯಾಪಾರಿಗಳನ್ನು ಕೇಳತಕ್ಕದ್ದು ಸಂಪ್ರದಾಯದಲ್ಲಿ ಇಲ್ಲವೇ ?

ಡಾ॥ ಆರ್. ನಾಗನಗೌಡ.—ಅವರು ರೆಗ್ಯುಲೇಟೆಡ್ ಮಾರ್ಕೆಟ್ ಮಾಡುವಾಗ notification ಹೊರಡಿಸುತ್ತಾರೆ. ಆದ್ದರಿಂದ ಎಲ್ಲರಿಗೂ information ಕೊಟ್ಟ ಹಾಗಾಗುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಖಾಸಗೀ ಜನಗಳ ಒಪ್ಪಿಗೆ ಇದಕ್ಕೆ ಬೇಕಾಗಿರುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಸಂಬಂಧಪಟ್ಟವರೆಲ್ಲ ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಏನೂ ಆಕ್ಷೇಪಣೆ ಇಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—Actನ ಪ್ರಕಾರ Corporation ಮತ್ತು ಜಿಲ್ಲಾ ಬೋರ್ಡ್ ಅಭಿಪ್ರಾಯಬೇಕಾಗಿದೆ. ವ್ಯಾಪಾರಗಾರರ ಮತ್ತು ಖಾಸಗೀ ಸಮಿತಿಗಳ ಅಭಿಪ್ರಾಯ ಬೇಕಿಲ್ಲ ಎಂದು ತಾನೇ ಇರುವುದು ?

ಡಾ॥ ಆರ್. ನಾಗನಗೌಡ.—ಇದರೊಳಗೆ particular bodies ನ್ನು ಅಂದರೆ ಡಿಸ್ಟ್ರಿಕ್ಟ್ ಬೋರ್ಡ್, ಕಾರ್ಪೊರೇಷನ್ mention ಮಾಡಿದ್ದೇವೆ. ಮಿಕ್ಕವರಿಗೆ ನಾವು ನೋಟೀಸ್ ಕೊಟ್ಟಿದ್ದೇವೆ. ಅವರು ತಮ್ಮ ಅಭಿಪ್ರಾಯವನ್ನು ತಿಳಿಸತಕ್ಕದ್ದು ಏನಾದರೂ ಇದ್ದರೆ ತಿಳಿಸಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ಮಾರ್ಕೆಟ್ಟಿಗೆ ಮಾರಾಟಕ್ಕೆ ಬರುವ ಪದಾರ್ಥಗಳು ವಿಶೇಷವಾಗಿ ಹಳ್ಳಿಗಳಿಂದ ಬರುವುದು ಗೊತ್ತಿದೆಯೇ ?

Mr. SPEAKER.—That question has been answered.

ಶ್ರೀ ಡಿ. ಎಂ. ಗೋವಿಂದರಾಜು.—Regulated Marketಗಳನ್ನು ಎಲ್ಲೆಲ್ಲ ತೆಗೆದುಕೊಳ್ಳಬೇಕು ಎಂದು ಸರ್ಕಾರದ ಉದ್ದೇಶ ?

ಡಾ॥ ಆರ್. ನಾಗನಗೌಡ.—ನುಮಾರು ಒಂಬತ್ತು ಹತ್ತು ಸ್ಥಳಗಳಲ್ಲಿ.

ಶ್ರೀ ಡಿ. ಎಂ. ಗೋವಿಂದರಾಜು.—ಯಾವ ಯಾವ ಸ್ಥಳಗಳು ಎಂಬುದನ್ನು ಹೇಳುತ್ತೀರಾ ?

ಡಾ॥ ಆರ್. ನಾಗನಗೌಡ.—ಚಿಂತಾಮಣಿ, ಚನ್ನಪಟ್ಟಣ, ಮತ್ತು ಇತರ ವ್ಯಾಪಾರ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕೆಂದು ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ರೆಗ್ಯುಲೇಟೆಡ್ ಮಾರ್ಕೆಟ್ ಇರುವ ಕಡೆ ರೈತರಿಗೆ ಅನುಕೂಲವಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಹೌದು.

Prohibition (Extension throughout the State).

Q.—271. **Sri H. T. PUTTAPPA** (Hosakote-Anekal-Scheduled Castes).—

Will the Government be pleased to state :—

(*a*) how long they will take to introduce prohibition throughout the State ;